# ಕರ್ನಾಟಕ ಸರ್ಕಾರ

## ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು

**ವಿಷಯ:** **ಡಾ॥ಎಂ.ಎಸ್.ಪ್ರಭುದೇವ, ಉಪನ್ಯಾಸಕರು, {ಪ್ರಿನ್ಸಿಪಾಲರು(ಪ್ರಭಾರೆ)} ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಅಮಾನತ್ತುಗೊಳಿಸುವ ಬಗ್ಗೆ.**

**ಓದಲಾಗಿದೆ:**

1) ಶ್ರೀ.ರಂಗು.ಬಿ.ಪವಾರ್, ಪ್ರಾಂಶುಪಾಲರು ಗ್ರೇಡ್-1, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ ಇವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಇಲಾಖಾ ವಿಚಾರಣೆ ವರದಿ ದಿನಾಂಕ: 20/10/2015 ವರದಿ ಸ್ವೀಕೃತವಾದ ದಿನಾಂಕ: 26/10/2015

**ಪ್ರಸ್ತಾವನೆ:**

ಓದಲಾದ ಪೂರ್ವಭಾವಿ ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಎಂ.ಎಸ್.ಪ್ರಭುದೇವ, ಉಪನ್ಯಾಸಕರು, [ಪ್ರಿನ್ಸಿಪಾಲರು(ಪ್ರಭಾರೆ)] ಇವರ ವಿರುದ್ಧ ಡಾ॥ ಉಮೇಶ.ಜಿ.ಜಾಧವ, ಶಾಸಕರು, ಚಿಂಚೋಳಿ ವಿಧಾನಸಭಾ ಕ್ಷೇತ್ರ ಇವರ ದೂರಿನ ಪತ್ರ ದಿನಾಂಕ: 05/10/2015ರಲ್ಲಿ 2015-16ನೇ ಸಾಲಿನ ವಿದ್ಯಾರ್ಥಿ ಸಂಘ ಹಾಗೂ ಕ್ರೀಡಾ ಸಂಘ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭ ಹಾಗೂ ಗಾಂಧಿ ಜಯಂತಿ, ಅಭಿಯಂತರರ ಮತ್ತು ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಆದರೆ, ಸದರಿ ಕಾರ್ಯಕ್ರಮದ ವಿಷಯವನ್ನು ಈ ಕ್ಷೇತ್ರದ ಶಾಸಕನಾದ ನನ್ನ ಗಮನಕ್ಕೆ ತರದೆ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಸಹ ಪ್ರಕಟಿಸದೆ ಕಾರ್ಯಕ್ರಮವನ್ನು ನಡೆಸಿರುತ್ತಾರೆ. ಈ ಕಾರ್ಯಕ್ರಮವನ್ನು ನಡೆಸಿದ ರೀತಿಯನ್ನು ಗಮನಿಸಿದರೆ ಉದ್ದೇಶಪೂರ್ವಕವಾಗಿಯೇ ನನ್ನನ್ನು ಆಹ್ವಾನಿಸದೆ ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತಾರೆ ಎಂಬುದಾಗಿ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನನ್ವಯ ಪ್ರಕರಣದ ಮತ್ತು ಶ್ರೀ.ಎಂ.ಎಸ್.ಪ್ರಭುದೇವ ಇವರ ಮೇಲಿನ ಆರೋಪಗಳ ಪೂರ್ವಾಪರವನ್ನು ತಿಳಿಯಲು ದಿನಾಂಕ: 19/10/2015ರಲ್ಲಿ ಶ್ರೀ.ರಂಗು.ಬಿ.ಪವಾರ್, ಪ್ರಾಂಶುಪಾಲರು ಗ್ರೇಡ್-1, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ ಇವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಇಲಾಖಾ ವಿಚಾರಣೆಯನ್ನು ನಡೆಸಲು ಸಮಿತಿಯನ್ನು ರಚಿಸಲಾಗಿತ್ತು. ಅದರಂತೆ, ಸದರಿ ಸಮಿತಿಯು ಪ್ರಕರಣದ ಬಗ್ಗೆ ಪೂರ್ವಭಾವಿ ಇಲಾಖಾ ವಿಚಾರಣೆಯನ್ನು ನಡೆಸಿ ವರದಿಯನ್ನು ದಿನಾಂಕ: 26/10/2015ರಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ದಿನಾಂಕ: 02/10/2015ರಂದು ನಡೆದಿರುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮುದ್ರಿಸಲಾದ ಆಮಂತ್ರಣ ಪತ್ರಿಕೆ ಮತ್ತು ಧಿನಪತ್ರಿಕೆಯಲ್ಲಿ ಮುದ್ರಿತಗೊಂಡ ಹೇಳಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸದಲ್ಲಿ ಮತ್ತು ಪ್ರಾಚಾರ್ಯರೊಂದಿಗೆ ಸಂಬಂಧಿಸಿದ ಸಮಿತಿಯೊಂದಿಗೆ ಸಂವಾದ ನಡೆಸಿದಾಗ ಶಿಷ್ಟಾಚಾರ ಉಲ್ಲಂಘನೆಯಾಗಿರುವುದು ಕಂಡುಬರುತ್ತದೆ. ಮತ್ತು ಶ್ರೀ.ರಾಜು ರಾಠೋಡ, ವಿಭಾಗಾಧಿಕಾರಿಗಳು, ಮೆಕ್ಯಾನಿಕಲ್ ವಿಭಾಗ ಇವರಿಗೆ ಅವಾಚ್ಯವಾಗಿ ನಿಂದಿಸಿದ್ದು, ಶ್ರೀ.ಜಬ್ಬಾರ.ಎಂ.ಎ, ಉಪನ್ಯಾಸಕರು ಇವರಿಗೆ ಸಂಬಳ ನೀಡದೆ ಕಿರುಕುಳ ನೀಡಿದ್ದು, ಶ್ರೀಮತಿ. ಸಾದಿಯಾ ಆಫ್ರಿನ್, ಉಪನ್ಯಾಸಕರು ಇವರಿಗೆ ಉಮ್ರಾ ಯಾತ್ರಾ (ಸೌದಿ ಅರೇಬಿಯಾ)ಗೆ ಹೋಗಲು ನಿರ್ದೇಶನಾಲಯದಿಂದ ರಜೆ ಮಂಜೂರಾತಿ ಪಡೆದು ಹಾಗೂ ಪ್ರಾಚಾರ್ಯರ ಅನುಮತಿ ಪಡೆದು ಯಾತ್ರೆಗೆ ಹೋದರೂ ಕೂಡ 45 ದಿನಗಳವರೆಗೆ ಹಾಜರಾತಿ ಪುಸ್ತಕದಲ್ಲಿ X ಮಾರ್ಕ್ ಮಾಡಿ ಒಂದು ತಿಂಗಳ ಸಂಬಳ ನೀಡದೆ ಸತಾಯಿಸಿರುತ್ತಾರೆ. ಪ್ರಾಚಾರ್ಯರು ಮತ್ತು ಉಪನ್ಯಾಸಕ ಸಿಬ್ಬಂದಿಗಳ ನಡುವೆ ಸಾಮರಸ್ಯ ಕೊರತೆ ಇದ್ದು, **"ಸಮಯ ಪರಿಪಾಲನೆ"** ಇಲ್ಲದೆ 'ಸಿಬ್ಬಂದಿಗಳ ಸಮಯ ಪ್ರಜ್ಞೆಯೇ ಈ

ಆರೋಪಗಳ ಸೃಷ್ಟಿಗೆ ಕಾರಣವೆಂಬುದು ನಮ್ಮ ಅಭಿಪ್ರಾಯವೆಂದು ಪೂರ್ವಭಾವಿ ಇಲಾಖಾ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ. ಅಲ್ಲದೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/66/ಹೆಚ್‌ಡಬ್ಲ್ಯೂಪಿ /2012, ದಿನಾಂಕ: 03/17-09-2012ರಲ್ಲಿ ಸರ್ಕಾರದ ಸಭೆ ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರ ಕುರಿತಂತೆ ಆದೇಶಿಸಿದ್ದರೂ ಸಹ ಸರ್ಕಾರದ ಆದೇಶವನ್ನು ಪಾಲಿಸದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುತ್ತಾರೆ.

ಇದಲ್ಲದೆ, ಶ್ರೀ.ಪ್ರಭುದೇವ ಇವರ ವಿರುದ್ಧ ಪರಿಶಿಷ್ಟ ವರ್ಗದ ಮತ್ತು ಹಿಂದುಳಿದ ವರ್ಗದ ಸಿಬ್ಬಂದಿ ವರ್ಗಕ್ಕೆ ಮಾನಸಿಕ ಕಿರುಕುಳ ನೀಡುತ್ತಿದ್ದು, ಇದರಿಂದ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದೆ ಹಾಗೂ ನಮ್ಮಗಳ ಆರೋಗ್ಯದ ಮೇಲೆಯೂ ದುಷ್ಪರಿಣಾಮ ಉಂಟಾಗುತ್ತಿದೆ. ದಲಿತ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದ ಉಪನ್ಯಾಸಕರುಗಳ ಬಗ್ಗೆ ನಕಾರಾತ್ಮಕವಾಗಿ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಮಾತನಾಡುವುದು, ತನ್ನ ಸ್ವಜಾತಿ ಉಪನ್ಯಾಸಕರುಗಳೊಂದಿಗೆ ಸಲಿಗೆಯಿಂದ ಮಾತನಾಡಿಸುತ್ತಾ, ಇತರರನ್ನು ಅವಮಾನಕರವಾಗಿ ಮಾತನಾಡಿಸುತ್ತಾ, ಎಲ್ಲರನ್ನೂ Suspend ಮಾಡುತ್ತೇನೆಂದು ಬೆದರಿಸುತ್ತಾರೆ ಎಂಬಿತ್ಯಾದಿ ದೂರಿನೊಂದಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರು ಸುಮಾರು 19 ಸಿಬ್ಬಂದಿಗಳು ಸಹಿ ಮಾಡಿ ದೂರು ಸಲ್ಲಿಸಿರುತ್ತಾರೆ.

ಮುಂದುವರೆದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಗುಲ್ಬರ್ಗಾ ಇಲ್ಲಿನ ಅಧ್ಯಕ್ಷರು ದಿನಾಂಕ: 23/01/2014ರಲ್ಲಿ ಒಂದು ಪತ್ರವನ್ನು ಬರೆದು ಶ್ರೀ.ಎಂಎಸ್.ಪ್ರಭುದೇವ ಇವರು ತಮ್ಮ ಅಧೀನದಲ್ಲಿಯ ಉಪನ್ಯಾಸಕರುಗಳಿಗೆ ಅದರಲ್ಲಿಯೂ ಹೊಸದಾಗಿ ನೇಮಕಾತಿ ಹೊಂದಿರುವ ಉಪನ್ಯಾಸಕರುಗಳಿಗೆ ಹಾಗೂ ಮಹಿಳಾ ನೌಕರರುಗಳಿಗೆ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದು, ವಿದ್ಯಾ ಸಂಸ್ಥೆಯಲ್ಲಿಯ ಉಪನ್ಯಾಸಕರುಗಳಿಗೆ ಅವಮಾನಕರ ರೀತಿಯಲ್ಲಿ ಮಾತನಾಡುತ್ತಿದ್ದು, ನೆಮ್ಮದಿಯಿಂದ ಪಾಠಪ್ರವಚನ ಮಾಡುವುದು ಕಷ್ಟವಾಗುತ್ತಿದೆಯೆಂದು ಸಂಸ್ಥೆಯ ಸಿಬ್ಬಂದಿಗಳು ನೌಕರರ ಸಂಘದ ಅಧ್ಯಕ್ಷರಿಗೆ ಮನವಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಸಂಘದ ಅಧ್ಯಕ್ಷರು ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ ಇಲ್ಲಿನ ಉಪನ್ಯಾಸಕರುಗಳು ಭಯದ ನೆರಳಲ್ಲಿ ಕೆಲಸ ಮಾಡುತ್ತಿದ್ದಾರೆ, ತಕ್ಷಣ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಿ ಉಪನ್ಯಾಸಕರು ಮುಕ್ತ ಮನಸ್ಸಿನಿಂದ ಪಾಠ ಪ್ರವಚನ ಮಾಡುವಂತೆ ಮತ್ತು ಸಿಬ್ಬಂದಿಯವರಿಗೆ ರಕ್ಷಣೆ ನೀಡಿ ಎಂಬುದಾಗಿ ಪತ್ರದ ಮುಖೇನ ಕೇಳಿಕೊಂಡಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಮತ್ತು ದೂರುಗಳನ್ನು ಹಾಗೂ ಪೂರ್ವಭಾವಿ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಶ್ರೀ.ಎಂ.ಎಸ್.ಪ್ರಭುದೇವ, ಉಪನ್ಯಾಸಕರು [ಪ್ರಿನ್ಸಿಪಾಲರು(ಪ್ರಭಾರೆ)] ಇವರ ವರ್ತನೆಯು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿರುವುದು ಮತ್ತು ಕರ್ತವ್ಯದಲ್ಲಿ ಪ್ರಾಮಾಣಿಕತೆ, ಸತ್ಯ, ನಿಷ್ಠೆ ತೋರಿಸುವುದರಲ್ಲಿ ವಿಫಲರಾಗಿರುವುದು, ಕರ್ತವ್ಯ ಚ್ಯುತಿ ಎಸಗಿರುವುದು ಮತ್ತು ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii)ನ್ನು ಉಲ್ಲಂಘಿಸಿದ ಆರೋಪಕ್ಕೆ ಒಳಗಾಗಿರುತ್ತಾರೆ. ಆದ್ದರಿಂದ ಶಿಷ್ಟಾಚಾರ ಉಲ್ಲಂಘನೆ ಜೊತೆಗೆ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘನೆ ಮಾಡಿರುವುದರಿಂದ ಸದರಿಯವರನ್ನು ಕೆಸಿಎಸ್ ಸಿಸಿಎ ನಿಯಮಾವಳಿ 1956ರ ಪ್ರಕಾರ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇದೇ ನಿಯಮಾವಳಿಯ 10(1)(ಡಿ)ರಡಿಯಲ್ಲಿ ನಿಲಂಭನೆಯಲ್ಲಿರಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಡಿಟಿಇ 13 ಡಿಇಕ್ಯೂ(1) 2015, ಬೆಂಗಳೂರು, ದಿನಾಂಕ: 29/10/2015** / 2455

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಶ್ರೀ.ಎಂ.ಎಸ್.ಪ್ರಭುದೇವ, ಉಪನ್ಯಾಸಕರು [ಪ್ರಿನ್ಸಿಪಾಲರು (ಪ್ರಭಾರೆ)], ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ ಇವರು 2015-16ನೇ ಸಾಲಿನ ವಿದ್ಯಾರ್ಥಿ ಸಂಘ ಹಾಗೂ ಕ್ರೀಡಾ ಸಂಘ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು

ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭದ ಆಮಂತ್ರಣ ಪತ್ರಿಕೆಯಲ್ಲಿ ಡಾ|| ಉಮೇಶ.ಜಿ.ಜಾಧವ, ಶಾಸಕರು, ಚಿಂಚೋಳಿ ವಿಧಾನಸಭಾ ಕ್ಷೇತ್ರ ಇವರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಬೇಜವಾಬ್ದಾರಿ ತನದಿಂದ ವರ್ತಿಸಿ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಹಾಗೂ ಪ್ರಾಮಾಣಿಕತೆಯನ್ನು ತೋರಿಸುವಲ್ಲಿ ವಿಫಲರಾಗಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ [ನಡತೆ] ನಿಯಮಾವಳಿ 1966ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii) ನ್ನು ಉಲ್ಲಂಘಿಸಿರುವ ಆರೋಪಕ್ಕೆ ಒಳಗಾಗಿರುತ್ತಾರೆ. ಆದ್ದರಿಂದ ಶ್ರೀ.ಎಂ.ಎಸ್.ಪ್ರಭುದೇವ, ಉಪನ್ಯಾಸಕರು [ಪ್ರಿನ್ಸಿಪಾಲರು (ಪ್ರಭಾರೆ)], ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ ಇವರನ್ನು ಪೂರ್ಣಾವಧಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ 10(1)(ಡಿ)ಅನ್ವಯ ಈ ತಕ್ಷಣದಿಂದಲೇ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಸದರಿಯವರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಸದರಿಯವರು ಇಲಾಖೆಯ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

**ನಿರ್ದೇಶಕರು**
**ನೇಮಕಾತಿ ಹಾಗೂ ಶಿಸ್ತು ಪ್ರಾಧಿಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

**ಇವರಿಗೆ,**

ಡಾ|| ಎಂ.ಎಸ್.ಪ್ರಭುದೇವ, ಉಪನ್ಯಾಸಕರು [ಪ್ರಿನ್ಸಿಪಾಲರು (ಪ್ರಭಾರೆ)], ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ

**<u>ಪ್ರತಿ: ಮಾಹಿತಿಗಾಗಿ.</u>**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಕೊಠಡಿ ಸಂ: 252, 2ನೇ ಮಹಡಿ, ವಿಧಾನಸೌಧ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ [ಉನ್ನತ ಶಿಕ್ಷಣ], ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
4. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
5. ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಬೆಂಗಳೂರು.
6. ಜಿಲ್ಲಾ ಖಜಾನಾಧಿಕಾರಿಗಳು, ಕಾಳಗಿ
7. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
8. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
9. ನಿರ್ದೇಶಕರ ಆಪ್ತಶಾಖೆಗೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
10. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ತಾಂತ್ರಿಕ ಶಿಕ್ಷಣ ಇಲಾಖೆಯ ಅಂತರ್‌ಜಾಲ (ಇಂಟರ್‌ನೆಟ್) ಪ್ರಕಟಿಸಲು.
12. ಇಎಸ್‌ಟಿ (1)ಎ, ಇಎಸ್‌ಟಿ(2)ಎ, ಇಎಸ್‌ಟಿ(9), ಇಎಸ್‌ಟಿ(7) ವಿಭಾಗಗಳಿಗೆ.
13. ಕಛೇರಿ ಪ್ರತಿ.